ನಮಗೀಗ ವಸ್ತುಸ್ಥಿತಿಯ ಮಾಹಿತಿಯಿಲ್ಲ. ವಾಸ್ತವಿಕವಾಗಿ ಏನಿದೆಯೆಂದು ನಮಗೆ ಗೊತ್ತಿಲ್ಲ. ನಮ್ಮ ಗಮನಕ್ಕೆ ತಂದಿದ್ದೀರಿ ಅಗತ್ಯ ಕ್ರಮ ಕೈಗೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು: ವಸ್ತುಸ್ಥಿತಿ ಇಲ್ಲ ಏನಿಲ್ಲ. ವಿಷಯ ಇಷ್ಟೇ ಇರುವುದು ಅವರೆಲ್ಲಾ ಕೆದಕಿ ಕೆದಕಿ ಕೇಳಿದ ನಂತರ ಅದು ಹಾಗೆ ಇದು ಹೀಗೆ ಎಂದು ಹೇಳುತ್ತಾರೆ. Conservator ರವರಿಗೆ ತಕ್ಷಣ ಬಿಡುಗಡೆ ಮಾಡುವುದಕ್ಕೆ ಹೇಳಿ.

ಶ್ರೀ ಬಿ. ರಮಾನಾಥ ರೈ: ಆಯಿತು Conservator ಗೆ ಹೇಳಿ ಈಗಲೇ ಸರಿಪಡಿಸೋಣ.

ಅಧ್ಯಕ್ಷರು: ಈಗ ಬೋಪಯ್ಯರವರು ಹೋದರು, ಕಡೆಗೆ ಇವರು ಅರ್ಧ confuse ಮಾಡಿ ಬರುತ್ತಾರೆ. ಅವರು ವಕೀಲರು ಬೇರೆ.

10. ಗಮನ ಸೆಳೆಯುವ ಸೂಚನೆಗಳು

1) ವಿಷಯ: ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಕಾಚೇನಹಳ್ಳಿ ಏತ ನೀರಾವರಿ ಯೋಜನೆ ಕುಂಠಿತಗೊಂಡಿರುವ ಬಗ್ಗೆ

*****

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಕಾಚೇನಹಳ್ಳಿ ಏತ ನೀರಾವರಿ ಯೋಜನೆ ಬಗ್ಗೆ ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ. ಕಾಚೇನಹಳ್ಳಿ ಏತ ನೀರಾವರಿ ಯೋಜನೆಯ ಒಂದನೇ ಹಂತ, ಎರಡನೆಯ ಹಂತ ಮತ್ತು ಮೂರನೇ ಹಂತದ ಯೋಜನೆಗೆ ಸುಮಾರು 165 ಕೋಟಿ ರೂ.ಗಳಿಗೆ ಸರ್ಕಾರಿ ಆದೇಶ ಸಂಖ್ಯೆ:37/ಎನ್.ಎಸ್.ಸಿ/2700 ಬೆಂಗಳೂರು ದಿ:30–07–2007 ರಲ್ಲಿ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಮಾನ್ಯ ನೀರಾವರಿ ಮಂತ್ರಿಗಳು, ಅರಣ್ಯ ಮಂತ್ರಿಗಳು, ಕಂದಾಯ ಮಂತ್ರಿಗಳು ಸದನದಲ್ಲಿದ್ದಾರೆ.

ಅಧ್ಯಕ್ಷರು: ಈಗ ಪ್ರಶ್ನೆ ಕೇಳಿ. ಅದು ಬೇರೆ ಮಾತು ಮಾನ್ಯ ಸಚಿವರೆ ಉತ್ತರ ಹೇಳಿ.

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವೃತ್ತ ಇವರು ಪ್ರಶ್ನಿತ ಯೋಜನೆಗಾಗಿ 8.16 ಹೆ. ಅರಣ್ಯ ಭೂಮಿಯ ಬಿಡುಗಡೆ ಕುರಿತಾಗಿರುವ ಪ್ರಸ್ತಾವನೆಯನ್ನು ನಿಗದಿತ ನಮೂನೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರಿಗೆ ಜುಲೈ 2014ರಲ್ಲಿ ಪ್ರಸ್ತಾವನೆ ಸಲ್ಲಿಸಿರುವರು. ಅದರಂತೆ, ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಕ್ಷೇತ್ರಾಧಿಕಾರಿಗಳ ವರದಿಗಳ ಹಿನ್ನೆಲೆಯಲ್ಲಿ ಉದ್ದೇಶಿತ 5.11 ಕಿ.ಮೀ. ಉದ್ದದ ಕಾಲುವೆಯು ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿದ್ದು, ಈ ಅರಣ್ಯ ಪ್ರದೇಶದಲ್ಲಿನ ಕಾಲುವೆಯ ಕಾಮಗಾರಿಯನ್ನು ಉಪಯೋಗಿ ಸಂಸ್ಥೆಯವರು ಈಗಾಗಲೇ ಸುಮಾರು ವರ್ಷಗಳ ಹಿಂದೆಯೇ ನಿರ್ವಹಿಸಿದ್ದಾರೆ. ಪ್ರಶ್ನಿತ ಯೋಜನೆಗಾಗಿ ಉಪಯೋಗಿ ಸಂಸ್ಥೆಯವರು ಕೋರಿರುವಂತೆ 8.16 ಹೆ. ಅರಣ್ಯ ಭೂಮಿಯನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ, 1980ನ್ನು ಉಲ್ಲಂಘಿಸಿ ನಿರ್ವಹಿಸಿರುವ ಹಿನ್ನೆಲೆಯಲ್ಲಿ ಪ್ರಶ್ನಿತ ಅರಣ್ಯ ಪ್ರದೇಶದ ಬಿಡುಗಡೆಗಾಗಿ ಕೇಂದ್ರ ಸರ್ಕಾರದಿಂದ ಘಟನೋತ್ತರ (post-facto) ಮಂಜೂರಾತಿಯನ್ನು/ಅನುಮೋದನೆಯನ್ನು ಪಡೆಯಬೇಕಾಗಿದೆ. ಹಾಗೆಯೇ ಪ್ರಶ್ನಿತ ಪ್ರಸ್ತಾವನೆಗೆ ಅನ್ವಯಿಸುವಂತೆ ಈ ಕೆಳಗೆ ಪಟ್ಟಿ ಮಾಡಲಾಗಿರುವ ಅಂಶಗಳಿಗೆ ಉಪಯೋಗಿ ಸಂಸ್ಥೆ ಮತಿಯಿಂದ ಮಾಹಿತಿ ಪಡೆಯಬೇಕಿರುತ್ತದೆ.

1. ಪರಿಹಾರಾತ್ಮಕ ನೆಡುತೋಪು ಬೆಳೆಸಲು ಗುರುತಿಸಲಾಗಿರುವ ಅರಣ್ಯೇತರ ಪ್ರದೇಶದ ಸಂಪೂರ್ಣ ವಿವರಗಳು.
2. ಹಾಗೆಯೇ ಪ್ರಸ್ತುತ ಕಾಮಗಾರಿಯು ಪ್ರಸ್ತಾಪಿತ ಅರಣ್ಯ ಪ್ರದೇಶಗಳಲ್ಲದೇ ಇನ್ನಿತರೆ ಅರಣ್ಯ ಪ್ರದೇಶಗಳನ್ನು ಸಹ ಒಳಗೊಂಡಿರುವುದರಿಂದ ಉಪಯೋಗಿ ಸಂಸ್ಥೆಯ ಅಗತ್ಯ ಸ್ಪಷ್ಟೀಕರಣ/ವಿವರಣೆ.

3. ಬುಡಕಟ್ಟು ಜನಾಂಗ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಕಾಯ್ದೆ (Forest Rights Act) –2006 ಮತ್ತು ನಿಯಮ 2008ರನ್ವಯ ಅಗತ್ಯ ಅನುಸರಣಾ ವರದಿ/ಪ್ರಮಾಣ ಪತ್ರಗಳು.

ಉಪಯೋಗಿ ಸಂಸ್ಥೆಯಿಂದ ಈ ಮೇಲ್ಕಂಡ ಮಾಹಿತಿಯನ್ನು ಪಡೆದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಘಟನೋತ್ತರ ಮಂಜೂರಾತಿಗಾಗಿ ಶಿಫಾರಸ್ಸಿನೊಂದಿಗೆ ಸಲ್ಲಿಸಲಾಗುವುದು.

ಕಾಚೇನಹಳ್ಳಿ ಏತ ನೀರಾವರಿ ಹೇಮಾವತಿ ನದಿಯಿಂದ .73 ಟಿ.ಎಂ.ಸಿ ನೀರನ್ನು ಎತ್ತಿ ಎರಡು ಹಂತಗಳಲ್ಲಿ 8,000 ಎಕರ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಯೋಜಿಸಲಾಗಿರುತ್ತದೆ. ಮೂರನೇ ಹಂತವನ್ನು 4600 ಎಕರೆ ನೀರು ಲಭ್ಯತೆಯ ಆಧಾರದ ಮೇಲೆ ಎರಡು ಹಂತಗಳಲ್ಲಿ ಪೂರ್ಣಗೊಂಡ ನಂತರ ಪರಿಶೀಲಿಸುವ ಬಗ್ಗೆ ದಿ:30.07.2007 ರಂದು ಸರ್ಕಾರಿ ಆದೇಶದಲ್ಲಿ ತಿಳಿಸಲಾಗಿರುತ್ತದೆ. 1991 ರಲ್ಲಿ ಈ ಯೋಜನೆಯು ಸಣ್ಣ ನೀರಾವರಿ ಇಲಾಖೆಯಿಂದ ಪ್ರಾರಂಭವಾಗಿ 1992 ರಲ್ಲಿ ಹೇಮಾವತಿ ಯೋಜನಾ ವಲಯದಿಂದ ಗೊರೂರಿಗೆ ಹಸ್ತಾಂತರವಾಗಿರುತ್ತದೆ. ಮೊದಲನೇ ಹಂತದ ಕಾಮಗಾರಿಯ ಮೊತ್ತ 62 ಕೋಟಿ ರೂ.ಗಳಿದ್ದು, ಇಲ್ಲಿಯವರೆಗೆ 48.63 ಕೋಟಿ ರೂ.ಗಳು ವೆಚ್ಚವಾಗಿದ್ದು, ಬಹುತೇಕ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು ವಿದ್ಯುತ್ ಸಂಪರ್ಕಕ್ಕಾಗಿ ಇರುವ 18 ಟವರ್‌ಗಳ ಪೈಕಿ 15 ಟವರ್‌ಗಳು ಪೂರ್ಣಗೊಂಡಿದ್ದು ಉಳಿದ ಮೂರು ಟವರ್‌ಗಳು ಪ್ರಗತಿಯಲ್ಲಿದ್ದು, ಪ್ರಗತಿ ಪೂರ್ಣಗೊಂಡ ನಂತರ ಪೈಪ್‌ಲೈನ್ ಹಾಕಿ ಜನವರಿ 2015 ರ ಮೊದಲ ವಾರದಲ್ಲಿ trial runಗೆ ಒಳಪಡಿಸಲಾಗುವುದು. ಎರಡನೇ ಹಂತದ ಕಾಮಗಾರಿಯ ಅಂದಾಜು ಮೊತ್ತ 35 ಕೋಟಿ ರೂಪಾಯಿಗಳಿದ್ದು, ಇಲ್ಲಿಯವರೆಗೆ 16.07 ಕೋಟಿ ರೂ.ಗಳ ವೆಚ್ಚವಾಗಿರುತ್ತದೆ. ಈ ಹಂತದಲ್ಲಿ ಬರುವ ದಂಡಿಗನಹಳ್ಳಿ branch canal ಕಾಲುವೆ 22.05 ಕಿ.ಮೀ ಇದ್ದು, 12.25 ಕಿ.ಮೀ ನಾಲಾ ಕಾಮಗಾರಿ ಕೆಲಸ ಪೂರ್ಣಗೊಂಡಿದ್ದು, ಉಳಿದ 5.02 ಕಿ.ಮೀ ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿದ್ದು, ಅರಣ್ಯ ಭೂ ಸ್ವಾಧೀನ ಪ್ರಸ್ತಾವನೆಯಡಿಯಲ್ಲಿ 20 ಎಕರೆ

compensatory afforestation land ಮಂಜೂರಾಗಿದ್ದು ಪ್ರಸ್ತಾವನೆಯು ಬೆಂಗಳೂರಿನ PCCF ಕಛೇರಿಯಲ್ಲಿ ಪ್ರಕ್ರಿಯೆಯಲ್ಲಿರುತ್ತದೆ. ಸದರಿ ಪ್ರಸ್ತಾವನೆಯು ಭಾರತ ಸರ್ಕಾರದ ಅರಣ್ಯ ಇಲಾಖೆಯಿಂದ ಅನುಮೋದನೆ ಆಗಬೇಕಾಗಿರುತ್ತದೆ. ಎರಡನೇ ಹಂತದ ಕಾಮಗಾರಿ ಅಡಿಯಲ್ಲಿ ಅರಣ್ಯ ಪ್ರದೇಶಗಳಿಂದ ಹಾದು ಹೋಗುವ ಹಾಗೂ ಕಾಲುವೆಗೆ ಅಡ್ಡಲಾಗಿರುವ ರೈಲ್ವೆ ಕ್ರಾಸಿಂಗ್ ಕಾಮಗಾರಿಯನ್ನು ಪೂರ್ಣಗೊಳಿಸಿ ಜುಲೈ 2015 ರೊಳಗೆ ಪೂರ್ಣಗೊಳಿಸಲು ಕಾರ್ಯಾಚರಣೆಗೊಳಿಸಲಾಗುವುದು.

ಅಧ್ಯಕ್ಷರು: Very good ಆಯಿತು ಸಾಕು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರಿಂದ ಹೇಳಿಕೆಯನ್ನು ಕೊಡಿಸುತ್ತೇನೆಂದು ಹೇಳಿದಿರಿ. ಇದು ಅರಣ್ಯಕ್ಕೆ ಸಂಬಂಧಪಟ್ಟ ವಿಷಯ ಅವರು ಉತ್ತರ ಕೊಡಬೇಕು. ಮೊನ್ನೆ ನೀವು ಹೇಳಿದ ಕಾರಣಕ್ಕೆ ಕೇಳಿರುವುದು.

ಅಧ್ಯಕ್ಷರು: ರೇವಣ್ಣ ರವರೆ ನೀವೇನು ಮಾತನಾಡುತ್ತೀರಿ?

ಶ್ರೀ ಹೆಚ್.ಡಿ. ರೇವಣ್ಣ: ಅವರು Statement ಕೊಟ್ಟಿದ್ದಾರೆ. ಅವರು ಹೇಳಿಕೆ ಕೊಡಬೇಕು.

ಅಧ್ಯಕ್ಷರು: ಅವರಿಗೆ ಸಂಬಂಧಪಟ್ಟಿಲ್ಲ, record ಅವರ ಇಲಾಖೆಗೆ ಹೋಗುತ್ತದೆ ಅಲ್ಲಿ ತೀರ್ಮಾನ ಮಾಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ: ಅರಣ್ಯ ಇಲಾಖೆ ಮತ್ತು Land acquisition ಎರಡು ವಿಚಾರ ಇದೆ ಇನ್ನೂ ಎರಡನೇ ಮತ್ತು ಮೂರನೇ ಹಂತದ್ದು ಆಗಬೇಕು.

ಅಧ್ಯಕ್ಷರು: ನೀವು ಹೀಗೆ dictate ಮಾಡಬೇಡಿ.

ಶ್ರೀ ಹೆಚ್.ಡಿ. ರೇವಣ್ಣ: ದಯಮಾಡಿ ಈ ರೀತಿಯೆಲ್ಲಾ ಹೇಳಬೇಡಿ. ನೀವು record ತೆಗೆಸಿ ನೋಡಿ. ಅವರೇ ಹೇಳಿಕೆ ಕೊಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು: ಹಾಗಾದರೆ, ಅರಣ್ಯ ಸಚಿವರೇ ನೀವೇ ಹೇಳ್ರಿ.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು): ಮಾನ್ಯ ಅಧ್ಯಕ್ಷರೆ, ಇದು 18 ವರ್ಷಗಳ ಹಿಂದಿನ ಪ್ರಕರಣ. ಇದು ಹೇಗೆ ಆಗಿದೆಯೆಂದರೆ, Forest Conservation Act ಪ್ರಕಾರ ಆಗಿದೆ.

ಅಧ್ಯಕ್ಷರು: ಅದು ಬೇಡ ಬೇಗ release ಮಾಡಿಕೊಡಿ.

ಶ್ರೀ ಬಿ. ರಮಾನಾಥ ರೈ: ಒಂದು ನಿಮಿಷ ವಿವರಿಸುತ್ತೇನೆ. ಈಗಾಗಲೇ ಅರ್ಜಿಯನ್ನು ಹಾಕಿ. ಘಟನೋತ್ತರ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ: Conservator Forest ಅನ್ನು ದಯಮಾಡಿ ಕೇಳಿ ಸಾರ್.

ಅಧ್ಯಕ್ಷರು: ಅವರನ್ನೇ ಇಲ್ಲಿ ಕರೆದು ತಂದು ಕೂರಿಸಲೇ?

ಶ್ರೀ ಬಿ. ರಮಾನಾಥ ರೈ: ನಾನು ಕರೆದು ಮಾತನಾಡುತ್ತೇನೆ. ಈಗಾಗಲೇ ಅನುಮತಿ ಇಲ್ಲದೆ ಪ್ರಾರಂಭ ಮಾಡಿದ್ದಾರೆ. ನಾವು ಈಗ ಅರ್ಜಿ ಹಾಕಿದ್ದೇವೆ. ಅದನ್ನು ಸರಿಪಡಿಸಿ ಅವರಿಗೆ project move ಮಾಡುವುದಕ್ಕೆ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, Land acquisition proposal ಕಳುಹಿಸಿ ಐದು ವರ್ಷವಾದರೂ ಹಣವನ್ನು ಕೊಟ್ಟಿರುವುದಿಲ್ಲ. ಮಾನ್ಯ ಕಂದಾಯ ಸಚಿವರೂ ಇಲ್ಲೇ ಇದ್ದಾರೆ. ಅವರನ್ನು ಬೇಕಾದರೆ ಕೇಳಿ. ಒಂದು ಕಡೆ Forest clearance ಇಲ್ಲ. ಒಂದು ಪ್ರಾಜೆಕ್ಟ್ ಪೂರ್ಣಗೊಳಿಸುವುದಕ್ಕೆ 20 ವರ್ಷಗಳ ಕಾಲಬೇಕೇ? ಈ ರೀತಿಯಾದರೆ ಹೇಗೆ?

ಅಧ್ಯಕ್ಷರು: ಆ ಕಾಲದಲ್ಲಿ ನೀವೇ ಮಾಡಬೇಕಿತ್ತು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾವು ಮಾಡಿರುವುದರಿಂದಲೇ 155 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್: ಹೊಸ Land acquisition act ಪ್ರಕಾರ ಅದನ್ನು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಅದರಲ್ಲಿ ಹೊಸ Act ಏನೂ ಇಲ್ಲ, ಅದು ಹಳೆಯ Act ನಲ್ಲಿಯೇ ಇದೆ.

(ಗೊಂದಲ)

ಅಧ್ಯಕ್ಷರು: Acquisition cost ಬೇಗ ಪಾವತಿ ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾವು ಮಾಡಿರುವುದರಿಂದಲೇ 155 ಕೋಟಿ ರೂ.ಗಳನ್ನು ಕೊಟ್ಟಿರುವುದು.

ಶ್ರೀ ಡಿ.ಕೆ. ಶಿವಕುಮಾರ್: ಯಾವ ಕಾಲದಿಂದ ನಿಲ್ಲಿಸಿಕೊಂಡು ಬಂದು ನೀವು ಕಟ್ಟಿರುವುದು? ನೀವೇ ನಿಲ್ಲಿಸಿಕೊಂಡು ಬಂದಿರುವುದು.

ಶ್ರೀ ಹೆಚ್.ಡಿ ರೇವಣ್ಣ: ನಾವೇ ಕೊಟ್ಟಿರುವುದು. ನಿಮಗೆ ನಾಚಿಕೆಯಾಗುವುದಿಲ್ಲವೆ?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಒಳ್ಳೆ ಕಥೆ ಆಯಿತಲ್ಲವೇ? ನೀವೇ ನಿಲ್ಲಿಸಿಕೊಂಡು ಬಂದಿರುವುದು. ಈಗ ನಮ್ಮ ಮೇಲೆ ಹಾಕುತ್ತಿದ್ದೀರಿ. ನೀವು ಮಾಡುವುದಾದರೆ ಯಾವತ್ತೊ ಮಾಡಬಹುದಿತ್ತು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಕುಮಾರಸ್ವಾಮಿ ಅವರು ಬರಬೇಕಾಗಿತ್ತೇ?

(ಗೊಂದಲ)

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ಪುಟ್ಟಸ್ವಾಮಿ ಗೌಡ ಅವರ ಕಾಲದಿಂದಲೂ ಹಾಗೇ ಇದೆ. ಹೀಗಾಗಿ ಯಾರು ನಿಲ್ಲಿಸಿದ್ದಾರೆಂಬುದು ಗೊತ್ತಾಗುತ್ತದೆ. ನಿಲ್ಲಿಸಿರುವವರ್ಯಾರು?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಅಧಿಕಾರ ನಿಮ್ಮ ಕೈಯಲ್ಲಿಯೇ ಇತ್ತು. ಆ ಸಂಧರ್ಭದಲ್ಲಿ ನೀವೇ ಮಾಡಬಹುದಾಗಿತ್ತು.

(ಗೊಂದಲ)

ಅಧ್ಯಕ್ಷರು: ಆಯಿತು ಬಿಡಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಸುಮ್ಮನೆ ಏನೇನೋ ಮಾತನಾಡಬೇಡಿ. ಈ ಪ್ರಾಜೆಕ್ಟ್ ನಿಲ್ಲುವುದಕ್ಕೆ ನೀವೇ ಕಾರಣ. ರಾಜಕಾರಣ ಮಾಡಿಕೊಂಡು ನಿಲ್ಲಿಸಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನೀವು ರಾಜಕಾರಣ ಅಂತೆಲ್ಲಾ ಮಾತನಾಡಿದರೆ ಧರಣಿ ಮಾಡಬೇಕಾಗುತ್ತದೆ. ಎರಡನೇ ಹಂತ ಮತ್ತು ಮೂರನೇ ಹಂತ ಮಾಡಿ.

(ಗೊಂದಲ)

ಅಧ್ಯಕ್ಷರು: ಸಾಕು.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.ಎಸ್ ಪಕ್ಷದ ಸದಸ್ಯರುಗಳಾದ ಶ್ರೀ ಹೆಚ್.ಡಿ.ರೇವಣ್ಣ, ಶ್ರೀ ಕೆ.ಎಂ.ಶಿವಲಿಂಗೇಗೌಡ, ಶ್ರೀ ಎಂ.ಟಿ. ಕೃಷ್ಣಪ್ಪ ಬಾವಿಗೆ ಬಂದರು)

ಅಧ್ಯಕ್ಷರು: ಆಯಿತು, ಬನ್ನಿ.

(ಗೊಂದಲ)

ಅಧ್ಯಕ್ಷರು: ಚೆಲುವರಾಯ ಸ್ವಾಮಿ. ಇಲ್ಲ. ಬಿ.ಬಿ. ನಿಂಗಯ್ಯ

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ತಾಲ್ಲೂಕಿನ ಬಣಕಲ್ ಹೋಬಳಿಯದ್ದು.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಇದು calling attention ಇದು ಬಹಳ ಹಿಂದಿನ ಪ್ರಾಜೆಕ್ಟ್. ಈಗ ಅದು ಜನವರಿ ತಿಂಗಳಿಗೆ ನೀರು ಬಿಡುವ ಹಂತಕ್ಕೆ ಬಂದಿದೆ. ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ನಾನು ಅಲ್ಲಿಗೆ ಭೇಟಿ ನೀಡಿದ್ದೇನೆ. ನೀರನ್ನು ಬಿಡುವುದರಲ್ಲಿ ದೊಡ್ಡ ಸಮಸ್ಯೆಯೇನಿಲ್ಲ. Land ಪರಿಹಾರವನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಇದರಲ್ಲಿ ಅನಾವಶ್ಯಕವಾದ ರಾಜಕೀಯ ಮಾಡುವುದು ಬೇಡ. ಹಾಗಾಗಿ ಬಾವಿಯಲ್ಲಿರುವ ಎಲ್ಲಾ ಸದಸ್ಯರು ವಾಪಸ್ಸು ಬರಲಿ.

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಪ್ರಾಜೆಕ್ಟ್ 1993 ರ ಅಕ್ಟೋಬರ್‌ನಲ್ಲಿಯೇ ಬಂದಿರುವುದು. 1995 ರಲ್ಲಿ ಸಿ.ಓ.ಡಿ. ತನಿಖೆಯಾಗಿ ಸ್ಥಗಿತಗೊಂಡಿರುತ್ತದೆ. ನಂತರ 2012 ರ ಸೆಪ್ಟೆಂಬರ್ ನಲ್ಲಿ compensatory land ನೀಡಿ ಚಾಲನೆಯನ್ನು ಕೊಟ್ಟು ಪ್ರಾರಂಭ ಮಾಡಿದ್ದೇವೆ. 2007–2012 ರವರೆಗೆ compensatory land ನೀಡಿದ ಮೇಲೆ .

(ಗೊಂದಲ)

ಅಧ್ಯಕ್ಷರು: ಅಯ್ಯೋ ರಾಮ, ಬೇರೆಯವರನ್ನು ಕರೆದಿದ್ದೇನೆ ಮಹಾರಾಯರೆ,

(ಗೊಂದಲ)

ಶ್ರೀ ಎ. ಮಂಜು : ರೇವಣ್ಣ ಅವರೇ ಬಿಡಿ. ಆಗುತ್ತೆ ಬನ್ನಿ. ನಮ್ಮ ಕಾಲದಲ್ಲಿಯೇ ಆಗುತ್ತದೆ.

(ಗೊಂದಲ)

ಶ್ರೀ ಬಿ.ಬಿ. ನಿಂಗಯ್ಯ : ಹೇಳಿ ಬರುತ್ತೇನೆ.

(ಗೊಂದಲ)

ಅಧ್ಯಕ್ಷರು : ಆಯಿತು ಹೇಳಿ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ತಾಲ್ಲೂಕು, ಬಣಕಲ್ ಹೋಬಳಿಯ ಹೆಚ್.ಕೆ.ಬಿ. ರಸ್ತೆಗೆ ನಿರ್ಮಿಸಿರುವ ಮೋರಿಯಿಂದ ಮಳೆಗಾಲದಲ್ಲಿ ಹರಿದುಹೋಗುವ ಭಾರಿ ನೀರಿನಿಂದಾಗಿ ಭೂಮಿ ಕುಸಿದಿದ್ದು ರಸ್ತೆಯು ಯಾವುದೇ ಸಂದರ್ಭದಲ್ಲಿ ಕೊಚ್ಚಿ ಹೋಗುವ ಸಾಧ್ಯತೆಯಿದೆ. ಈ ವಿಚಾರದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು: ಮಾನ್ಯ ಕಂದಾಯ ಸಚಿವರೇ, ನಿಮಗೆ ಸಂಬಂಧಪಟ್ಟಿರುವುದು.

ಶ್ರೀ ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ನಿಮ್ಮ ಸೀಟಿನ ಮುಂದೆ ಜಗಳ ಮಾಡಿದರೆ ಹೇಗೆ? ಅವರವರ ಸೀಟಿನಲ್ಲಿ ಕುಳಿತುಕೊಂಡು ಮಾತನಾಡಬೇಕು.

(ಗೊಂದಲ)

ಶ್ರೀ ಎ. ಮಂಜು : ರೇವಣ್ಣನವರೆ ಹೇಗಿದ್ದರೂ ಈ ಪ್ರಾಜೆಕ್ಟ್ ಆಗುತ್ತಿದೆಯೆಂದು ತೋರಿಸಿಕೊಳ್ಳಬೇಡಿ. ಬನ್ನಿ.

(ಗೊಂದಲ)

ಅಧ್ಯಕ್ಷರು: ರೇವಣ್ಣ ನವರೇ ದಯವಿಟ್ಟು ಇಲ್ಲಿ ನಿಂತುಕೊಂಡು ಗಲಾಟೆ ಮಾಡಬೇಡಿ. ಸರ್ಕಾರ ಏನು ಹೇಳಬೇಕೋ ಅದನ್ನು ಹೇಳಿದೆ. ಸರ್ಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆಂದು ಹೇಳಿದ್ದಾರೆ. ಸದನದಲ್ಲಿ ಹೀಗೆ ಮಾಡಬೇಕು, ಹಾಗೇ ಮಾಡಬೇಕೆಂದು ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗ ಆಗುತ್ತಿದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಪುಟ್ಟಸ್ವಾಮಿ ಗೌಡರ ಕಾಲದಲ್ಲಿ ಅದನ್ನು ತಡೆದವರು ಯಾರು? ರೇವಣ್ಣ ಅವರೇ ಪುಟ್ಟಸ್ವಾಮಿ ಗೌಡರ ಕಾಲದಲ್ಲಿ ತಡೆದದ್ದು.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗ ನಾವು ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಇಲ್ಲಿ ನಿಂತುಕೊಳ್ಳುವುದಾದರೆ ನಿಂತುಕೊಳ್ಳಿ. ಗಲಾಟೆ ಮಾತ್ರ ಮಾಡಬೇಡಿ. ನೀವು ಇಲ್ಲಿ ನಿಂತುಕೊಂಡು ಯಾರ ಹತ್ತಿರವೂ ಮಾತನಾಡಬಾರದು. ಶಿವಲಿಂಗೇಗೌಡರೆ, ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ ಮಹಾರಾಯರೇ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಅವರು ನಿಲ್ಲಿಸಿರುವುದನ್ನು ನಮ್ಮ ಸರ್ಕಾರ complete ಮಾಡುತ್ತಿದೆ.

(ಗೊಂದಲ)

ಅಧ್ಯಕ್ಷರು: ಒಳ್ಳೆಯದಾಯಿತು.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್: ಈಗ ನಮ್ಮ ಸರ್ಕಾರ ಮಾಡುತ್ತಿದೆ.

ಶ್ರೀ ಎ. ಮಂಜು: ರೇವಣ್ಣ ನವರೇ, ತಮ್ಮ ಕಾಲದಲ್ಲಿ ಆಗಿರಲಿಲ್ಲ. ನಮ್ಮ ಕಾಲದಲ್ಲಿ ಆಗುತ್ತಿದೆ. ಒಳ್ಳೆಯದಾಗುತ್ತದೆ. ದಯಮಾಡಿ ಬನ್ನಿ. ಪುಟ್ಟಸ್ವಾಮಿ ಗೌಡರ ಕಾಲದಲ್ಲಿ ಆಯಿತು ಎಂದು ಹೊಟ್ಟೆಕಿಚ್ಚಿಗಾಗಿ ಪ್ರಚಾರ ತೆಗೆದುಕೊಳ್ಳಬೇಡಿ. ಆಗುತ್ತದೆ ಬನ್ನಿ. ಈಗ ಆಗುತ್ತಿದೆ. ಮಾಡುತ್ತಿಲ್ಲವೇ? 1993 ರಿಂದಲೂ ಏನು ಮಾಡುತ್ತೀದ್ದೀರಿ?

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಇವರು ಬರೀ ರಾಜಕಾರಣ ಮಾಡುತ್ತಾರೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ನಮ್ಮ ಸರ್ಕಾರ ಮಾಡುತ್ತಿದೆ.

(ಗೊಂದಲ)

ಶ್ರೀ ಎ. ಮಂಜು: ಮಾನ್ಯ ಅಧ್ಯಕ್ಷರೆ, ಇದು cheap popularity. ಪ್ರಚಾರ ತೆಗೆದುಕೊಳ್ಳುವುದಕ್ಕಾಗಿ ಬಂದಿರುವುದು. ಈಗ ಹೇಗಿದ್ದರೂ ಆಗುತ್ತಿರುವುದರಿಂದ ನಾವು ಬಂದು ಮಾತನಾಡಿದ್ದಕ್ಕೆ ಆಯಿತು ಎಂದು ತೋರಿಸಿಕೊಳ್ಳುತ್ತಿರುವುದು.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಇದು ಸಿದ್ಧರಾಮಯ್ಯನವರ ಸರ್ಕಾರ. ಹೊಟ್ಟೆ ಕಿಚ್ಚಿನ ಸರ್ಕಾರವಲ್ಲ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್: ನಮ್ಮ ನೂತನ ಸರ್ಕಾರ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು: ಈ ರೀತಿ ಮಾಡಬೇಡಿ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಪುಟ್ಟಸ್ವಾಮಿ ಗೌಡರನ್ನು ಏಕೆ ನಿಲ್ಲಿಸಿದಿರಿ.

(ಗೊಂದಲ)

ಶ್ರೀ ಎ. ಮಂಜು: ಕಾಚೇನಹಳ್ಳಿ Lift irrigation project ನಲ್ಲಿ ಅಪ್ಪ ಮಕ್ಕಳು ರಾಜಕಾರಣ ಮಾಡುತ್ತಿದ್ದೀರಿ. ಮಧ್ಯದಲ್ಲಿ ಮಾತನಾಡುತ್ತೀರಾ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ನಾನು ಕೇಳಿಕೊಳ್ಳುವುದೇನೆಂದರೆ, ರೇವಣ್ಣ ಅವರೇ ಹಿರಿಯರಾಗಿ ತಾವು ಈ ರೀತಿ ಮಾಡಬಾರದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಯಾವುದೇ ಕಾರಣದಿಂದಲೂ ನೀವು ಕ್ರೆಡಿಟ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ದಯವಿಟ್ಟು ಬನ್ನಿ. ನಾವು ಮಾಡುತ್ತೇವೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ನೀವುಗಳು ಹಾಸನ ಜಿಲ್ಲೆಗೆ ಬಂದು ಸ್ಟೇಟ್‌ಮೆಂಟ್ ಕೊಡುವುದನ್ನು ನಿಲ್ಲಿಸಿ ಎಲ್ಲವೂ ಸರಿಹೋಗುತ್ತದೆ – ಈ

ಮಾತುಗಳನ್ನು ಸದರಿ ಮಾನ್ಯ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಮಾತನಾಡಿರುತ್ತಾರೆ.

(ಗೊಂದಲ)

ಶ್ರೀ ಎ. ಮಂಜು: ರೀ, ಆ ಮಾತುಗಳನ್ನು ಬಿಡಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ನಿಮಗೆ ಲೋಕಲ್‌ನವರನ್ನು ಮಂತ್ರಿಮಾಡದೇ ಕೊಟ್ಟಿದ್ದೇವೆಯಲ್ಲಾ . .

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ನೀವು ಮೂರನೇ ಹಂತಕ್ಕೆ ಚಾಲನೆ ಕೊಟ್ಟರೆ ನನ್ನ ಕ್ಷೇತ್ರವಾದರೂ ಬದುಕುತ್ತದೆ. ಈ ಮಾತುಗಳನ್ನು ಸದರಿ ಮಾನ್ಯ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಮಾತನಾಡಿರುತ್ತಾರೆ.

(ಗೊಂದಲ)

ಶ್ರೀ ಎ. ಮಂಜು: ರೇವಣ್ಣ ನವರೇ ಈಗ ಆಯಿತು ತಾನೇ ಹೇಗಿದ್ದರೂ ನಾವು ಮಾಡುತ್ತಿದ್ದೇವೆ. ಬನ್ನಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ : ರೇವಣ್ಣ ನವರೇ, ಬನ್ನಿ.

(ಗೊಂದಲ)

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೇ, ರಂಗೇನಹಳ್ಳಿ **lift irrigation** ಗೆ ಲಿಫ್ಟ್ ಇರಿಗೇಶನಗೆ ಕಲ್ಲು ಹಾಕಿ ಬಂದು ಬಿಟ್ಟರು, ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ಧರಾಮಯ್ಯನವರೇ ಬಂದಿದ್ದರು. ಅಪ್ಪ ಮಕ್ಕಳು ಕಲ್ಲು ಹಾಕಿ, ಅದನ್ನು ನಿಲ್ಲಿಸಿಯೇ ಬಿಟ್ಟರು. ಶ್ರೀ ಸಿದ್ಧರಾಮಯ್ಯ ನವರೇ ಮುಖ್ಯಮಂತ್ರಿಗಳಾಗಿದ್ದರು.

(ಗೊಂದಲ)

ಅಧ್ಯಕ್ಷರು : ನನಗೇನೂ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಈಗ ಎಲ್ಲಿ ಬಂದು ತಾವು ಕುಳಿತುಕೊಳ್ಳುತ್ತೀರಿ? I cannot understand. ಅಸೆಂಬ್ಲಿಯಲ್ಲಿ ಈ ರೀತಿ ಯಾವತ್ತೂ ನಡೆಯುತ್ತಿರಲಿಲ್ಲ. ಪ್ರತಿಯೊಂದಕ್ಕೂ ಬಂದು, ರೇವಣ್ಣನವರೇ ಕೇಳಿ ಇಲ್ಲಿ. ಅದು ಫಾರೆಸ್ಟ್‌ನಲ್ಲಿರುವಂತಹ ಸಮಸ್ಯೆಯಾಗಿದೆ. ಆ ವಿಚಾರವನ್ನು ಕುಳಿತುಕೊಂಡು ಚರ್ಚೆ ಮಾಡಿ ಯಾವ ರೀತಿ settle ಮಾಡೋಣ ಅಂದರೆ ಆ ರೀತಿ ಮಾಡೋಣ. ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮೊದಲು ಹೋಗಿ ಕುಳಿತುಕೊಳ್ಳಿ.

(ಈ ಹಂತದಲ್ಲಿ ಜೆ.ಡಿ.ಎಸ್.ನ ಬಾವಿಯಲ್ಲಿದ್ದ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ಹೋಗಲು ಹೊರಗಡೆ ಹೋದರು)

(ಗೊಂದಲ)

ಅಧ್ಯಕ್ಷರು: ಬಿಡಿ ಮಹಾರಾಯರೆ. ಇಲ್ಲೊಂದು ಪ್ರಕಟಣೆಯಿದೆ.

11. ಪ್ರಕಟಣೆ

ಅಧ್ಯಕ್ಷರು: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118 ರ ಮೇರೆಗೆ 2014 ರ ಕರ್ನಾಟಕ ಭೂ ಸುಧಾರಣೆ ಮತ್ತು ಇತರ ಕೆಲವು ಕಾನೂನು ತಿದ್ದುಪಡಿ ವಿಧೇಯಕವನ್ನು ಈ ದಿನ ದಿನಾಂಕ 18.12.2014 ರಂದು ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು : ಬಿ.ಬಿ. ನಿಂಗಯ್ಯ ಅವರೇ ಹೇಳಿ.